# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 03-01-2023

**ಧನ್ನೂರಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 01/2023 ಕಲಂ 279, 304 (ಎ) ಐಪಿಸಿ ಜೊತೆ 187 ಐಎಮ್.ವಿ. ಕಾಯ್ದೆ :-**

ದಿನಾಂಕ: 01-01-2023 ರಂದು ಫಿರ್ಯಾದಿ ಶ್ರೀಮತಿ ಸುನೀತಾ ಗಂಡ ರಾಜಕುಮಾರ ಖಾನಾಪೂರ ವಯ: 45 ವರ್ಷ ಜಾತಿ: ಲಿಂಗಾಯತ ಉ: ಕೂಲಿ ಕೆಲಸ ಸಾ: ಅಷ್ಟೂರ ತಾ: ಬೀದರ ರವರು 2330 ಗಂಟೆಗೆ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ ಫಿರ್ಯಾದಿ ಮತ್ತು ಗಂಡನಾದ ರಾಜಕುಮಾರ ಮತ್ತು ಮಗನಾದ ನವೀನ ವಯ: 25 ವರ್ಷ ರವರೊಂದಿಗೆ ಅಷ್ಟೂರ ಗ್ರಾಮದಲ್ಲಿ ವಾಸವಾಗಿದ್ದು ಮಗನಾದ ನವೀನ ಈತನು 3-4 ದಿವಸ ವರ್ಷಗಳಿಂದ ಹುಮನಾಬಾದ APAC Financial service ನಲ್ಲಿ Relationship Branch Manager ಅಂತ ನೌಕರಿ ಮಾಡುತ್ತಿದ್ದು ಒಂದು ತಿಂಗಳದಲ್ಲಿ ಒಂದ ಅಥವಾ ಎರಡು ಸಲ ಇವರ ಹತ್ತಿರ ಬಂದು ಹೊಗುತ್ತಿದ್ದನು. ಮಗನ ಹತ್ತಿರ ಒಂದು ಕಾರ ನಂ. MH-43 X-0058 ಆರು ದಿವಸದ ಹಿಂದೆ ಖರಿದಿಸಿರುತ್ತಾರೆ. ಹೀಗಿರುವಲ್ಲಿ ಇಂದು ದಿನಾಂಕ: 01/01/2023 ರಂದು ಮದ್ಯಾಹ್ನ 3.00 ಗಂಟೆ ಸುಮಾರಿಗೆ ಮಗ ನವೀನ ಈತನು ನಾಳೆ ಮುಂಜಾನೆ ನೌಕರಿಗೆ ಹೊಗಬೇಕಾಗಿದೆ ಎಂದು ಹೇಳಿ ಮನೆಯಿಂದ ತನ್ನ ಕಾರ ನಂ. MH-43 X-0058 ನೇದನ್ನು ಚಲಾಯಿಸಿಕೊಂಡು ಹೋಗಿರುತ್ತಾನೆ. ನಂತರ ರಾತ್ರಿ 9.30 ಗಂಟೆ ಸುಮಾರಿಗೆ ಹುಮನಾಬಾದ- ಬೀದರ ರಸ್ತೆಯ ನೀಲಮನಳ್ಳಿ ತಾಂಡಾದ ಹತ್ತಿರ 7.45 ಗಂಟೆಗೆ ಲಾರಿ ನಂ MH-25 U-4753 ನೇದರ ಚಾಲಕನು ಅತಿವೇಗ ಹಾಗು ನಿಸ್ಕಾಳಜಿಯಿಂದ ಚಲಾಯಿಸಿಕೊಂಡು ಡಿಕ್ಕಿ ಮಾಡಿದ್ದರಿಂದ ಫಿರ್ಯಾದಿ ಮಗನಾದ ನವೀನ್ ಇತನು ಘಟನಾಸ್ಥಳದಲ್ಲೆ ಮೃತ ಪಟ್ಟಿರುತ್ತಾನೆ ಡಿಕ್ಕಿ ಮಾಡಿದ ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.